ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

೫೭. (೭೫) ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಮೂಡಿಗೆರೆ ತಾಲ್ಲೂಕಿನ ಬಿಳಿಗಲಿ ಗ್ರಾಮದ ಪ್ರೈಮರಿ ಹೆಲ್ತ್ ಯೂನಿಟ್ ಕಟ್ಟಡಕ್ಕೆ ಯಾವಾಗ ದುರಸ್ತಿಮಾಡಲಾಗಿತ್ತು ;

(ಆ) ಈಗ ಆ ಕಟ್ಟಡ ಬಹಳ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

(ಇ) ಈ ಕಟ್ಟಡಕ್ಕೆ ಸರ್ಕಾರವು ಯಾವಾಗ ದುರಸ್ತಿ ಮಾಡಿಸಬೇಕೆಂದು ಉದ್ದೇಶಿಸಿದೆ ?

ಶ್ರೀ ಎಚ್. ಸಿದ್ದವೀರಪ್ಪ. (ಆರೋಗ್ಯ ಮಂತ್ರಿಗಳು).—

ಉತ್ತರ .— (ಅ) ಮೂಡಿಗೆರೆ ತಾಲ್ಲೂಕಿನ ಬಿಳಿಗಲಿ ಗ್ರಾಮದಲ್ಲಿ ಪ್ರೈಮರಿ ಹೆಲ್ತ್ ಯೂನಿಟ್ ಇಲ್ಲ. ಆದರೆ ಬಿಳಿಗಲಿ ಗ್ರಾಮವು ಹಿರೆಬಯಲೆ ಪ್ರೈಮರಿ ಹೆಲ್ತ್ ಯೂನಿಟ್‌ಗೆ ಸೇರಿದ್ದು ಮೂಡಿಗೆರೆ ತಾಲ್ಲೂಕಿನಲ್ಲಿದೆ. ಹಿರೆಬಯಲೆ ಪ್ರೈಮರಿ ಹೆಲ್ತ್ ಯೂನಿಟ್ ಕಟ್ಟಡ ಸುಮಾರು ೬ ವರ್ಷಗಳ ಹಿಂದೆ ದುರಸ್ತಿ ಮಾಡಲಾಗಿತ್ತು.

(ಆ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ. (ಹಿರೆಬಯಲೆ ಪ್ರೈಮರಿ ಹೆಲ್ತ್ ಯೂನಿಟ್ ಕಟ್ಟಡ ಶಿಥಿಲವಾಗಿರುವುದು).

(ಇ) ಸದ್ಯದಲ್ಲೆ ದುರಸ್ತಿ ಮಾಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಲೋಕೋಪಯೋಗಿ ಇಲಾಖೆಯವರಿಗೆ ಕಟ್ಟಡವನ್ನು ತಾರೀಖು ೨೪ನೇ ಮೇ ೧೯೭೨ರಂದು ಒಪ್ಪಿಸಿದ್ದು ಅವಶ್ಯ ದುರಸ್ತಿಗಳನ್ನು ಮಾಡಲು ಕೇಳಿಕೊಳ್ಳಲಾಗಿದೆ.

MAINTENANCE OF N. H. No. 4

SRI B. G. BANAKAR (Hirekerur).—

58. (8) Will the Minister for Public Works and Electricity be pleased to state:—

(*a*) the various types and total number of officers or employees including the mile-coolies working on the National Highway No. 4;

(*b*) the total amount spent on the maintenace of this National Highway No. 4;

(*c*) the total number of trees and the number of tamarind trees alongside on this National Highway No. 4;

(*d*) the total number of trees felled or withered during the last three years up to the latest convenient date?

(SRI H. M. CHANNABASAPPA).— Minister for Public Works and Electricity

(*a*) Executive Engineers, Assistant Engineers, Junior Engineers Work Inspectors, Maistries, Mukadams, Mile Coolies and Drivers ..... 591.

(*b*) Rs. 28,72,590 during 1971-72.

(*c*) 40,464 out of which 8,474 are tamarind trees.

(*d*) 1,871 trees were cut or have withered, during the last three years.